ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ, ದಿನಾಂಕ ೨೪ನೇ ಮಾರ್ಚ್ ೧೯೮೪ ಚೈತ್ರ ೪, ೧೯೦೦ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ವಾರಾಹಿ ಜಲ ವಿದ್ಯುತ್ ಯೋಜನೆ

೧೨೩೦. ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವರಾಹಿ ಜಲವಿದ್ಯುತ್ ಯೋಜನೆ ಸಮೂಹದ ಕಾರ್ಯಾರಂಭವಾದ ದಿನಾಂಕದಿಂದ ಈವರೆಗೆ ಮಾಡಿರುವ ವೆಚ್ಚವೆಷ್ಟು ಹಾಗೂ ಯೋಜನೆ ಮುಗಿಯುವವರೆಗೆ ಬೇಕಾಗಿರುವ ಹಣದ ಪ್ರಮಾಣ ವೆಷ್ಟು ?

ಆ) ಈ ಯೋಜನೆಯಲ್ಲಿ ಈವರೆಗೆ ಎಷ್ಟು ಸಿವಿಲ್ ಅವ್ಯವಹಾರ ಹಾಗೂ ಸ್ಟೀಲ್ ವ್ಯವಹಾರದ ಪ್ರಕರಣಗಳು ಕೆ ಪಿ ಸಿ ಗಮನಕ್ಕೆ ಬಂದಿದೆಯೆ ?

ಇ) ಈ ಪ್ರಕರಣಗಳಲ್ಲಿ ತಪ್ಪಿತಸ್ಥರ ಮೇಲೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಮಂತ್ರಿಗಳು)

ಅ) ಈ ವರೆಗೆ ಅಂದರೆ ಫೆಬ್ರವರಿ ೮೩ರ ತನಕ ಒಟ್ಟು ೧೭೫.೦೯ ಕೋಟಿ ರೂ. ವೆಚ್ಚ ಆಗಿದೆ. ಯೋಜನೆ ಮುಗಿಯುವವರೆಗೆ ಇನ್ನೂ ೨೪.೯೧ ಕೋಟಿ ರೂ. ಬೇಕಾಗುವುದು.

ಆ) ಇ) ಇದುವರೆಗೆ ಒಂದು ಸಿವಿಲ್ ಪ್ರಕರಣ ವರದಿಯಾಗಿದ್ದು ಇದರ ಬಗ್ಗೆ ವಿಚಾರಣೆ ನಡೆಸಿ, ಜಾಗೃತಾಧಿಕಾರಿಯವರ ಶಿಫಾರಸ್ಸಿನ ಮೇರೆಗೆ ನಿಗಮವು ಕ್ರಮ ಕೈಗೊಳ್ಳುತ್ತದೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೆ, ವರಾಹಿ ಜಲವಿದ್ಯುತ್ ಯೋಜನೆ ಪ್ರಾರಂಭವಾಗುವಾಗ ಎಷ್ಟು ಕೋಟಿ ರೂಪಾಯಿಗಳಿಗೆ ಎಸ್ಟಿಮೇಟ್ ಮಾಡಲಾಗಿತ್ತು ? ಇದರಲ್ಲಿ ಒಂದು ಸಿವಿಲ್ ಪ್ರಕರಣ ವರದಿಯಾಗಿತ್ತು. ಆದರ ಬಗ್ಗೆ ವಿಚಾರಣೆ ನಡೆಸಿ, ಜಾಗೃತ ಅಧಿಕಾರಿಗಳ ವರದಿಯಮೇರೆಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದ್ದೀರಿ ಆ ಪ್ರಕರಣ ಯಾವುದು? ಯಾವ ವರ್ಷದಲ್ಲಿ ನಡೆದಿದೆ ? ಈಗ ೨೦೦ ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಲಾಗಿದೆಯೆಂದು ತಿಳಿದಿದೆ ಇದು ನಿಜವೆ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ವರಾಹಿ ಯೋಜನೆಗೆ ಮೊದಲು ಅಂದಾಜು ಮಾಡಿದ್ದುದು ೧೩೮ ಕೋಟಿ ರೂಪಾಯಿಗಳಿಗೆ, ೨೦೦ ಕೋಟಿ ರೂಪಾಯಿಗಳು ಅಲ್ಲ. ಇದರ ಬಗ್ಗೆ ನಿರ್ದಿಷ್ಟವಾಗಿ ಲೆಕ್ಕ ಸಿಗುತ್ತಿಲ್ಲ. ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ೨೦೦ ಕೋಟಿ ಮಾಡಿದ್ದಾರೆ. ಈಗಾಗಲೇ ೧೭೫.೦೯

ಕೋಟಿ ರೂಪಾಯಿಗಳು ವೆಚ್ಚವಾಗಿದೆ. ಇನ್ನು ಕೇವಲ ೨೪.೯೧ ಕೋಟಿ ರೂಪಾಯಿಗಳ ಹಣ ಬೇಕಾಗಿದೆ. ೧೯೮೫ನೇ ಇಸವಿಯೆಲ್ಲಿ ಕೇವಲ ಏಳೂವರೆ ಮೂಟೆ ಸಿಮೆಂಟ್‌ಗೆ ಸಂಬಂಧಪಟ್ಟಂತೆ ಹಗರಣ ವಾತ್ರ ಸಿಕ್ಕಿತ್ತು ಇದರ ಬಗ್ಗೆ ನಡೆದಿದ್ದು, ಕೆ.ಪಿ.ಸಿ, ಎಂ,ಡಿ.ಯವರಿಗೆ ವರದಿ ಬಂದಿದೆ. ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಮಂತ್ರಿಯವರು ಏಳೂವರೆ ಮೂಟೆ ಸಿಮೆಂಟ್ ಹಗರಣ ಎಂದು ಹೇಳಿದ್ದಾರೆ. ಇದು ಸರಿಯಾದುದಲ್ಲ, ಯಾವುದೋ ಹೆಸರನ್ನು ಮುಚ್ಚಿಡುವಂಥ ಪ್ರಯತ್ನ ಮಾಡುತ್ತಿದ್ದಾರೆ. ಒಂದು ಕಂಪನಿಗೆ ಸಂಬಂಧಪಟ್ಟಂತೆ ಹಗರಣ ನಡೆದಿದೆ. ಇದರ ಬಗ್ಗೆ ಸ್ಪಷ್ಟಪಡಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಯಾವುದೇ ಕಂಪನಿಯ ಬಗ್ಗೆ. ಅಥವಾ ಯಾವುದೇ ವೈಯಕ್ತಿಕ ಪ್ರಕರಣದ ಬಗ್ಗೆ ಇದೆ ಎಂದು ಇಲ್ಲ. ತಮ್ಮ ಹತ್ತಿರ ಈ ಪ್ರಕರಣ ಅಲ್ಲದೆ ಬೇರೆ ಪ್ರಕರಣದ ವಿವರ ಇದ್ದರೆ, ಅದನ್ನು ಕೊಟ್ಟರೆ ಯಾವುದೇ ಮುಲಾಜು ಇಲ್ಲದೇ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ತಾವು ಹೇಳಿದಂತೆ ಇದು ೧೯೫೫ರ ಪ್ರಕರಣ ಆಯಿತು. ಈಗ ೧೯೮೫ನೇ ಇಸವಿ ಬಂದರೂ ಇದುವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇನ್ನು ಎರಡನೆಯದಾಗಿ ಡಿ.ವೈ.ಎಸ್.ಪಿ. ನಾರಾಯಣ್ ನಡುಮನಿ ಅವರು ಪರಾಹಿ ಪ್ರಾಜೆಕ್ಟ್‌ನಲ್ಲಿ ಒಂದು ಲಾರಿಯನ್ನು ಹಿಡಿದಿದ್ದರು, ಆ ವಿಚಾರ ಇದರಲ್ಲಿ ಇಲ್ಲ. ಇನ್ನು ಈ ಒಂದು ಮೆಕಾನೈಸ್ಡ್ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಇವರ ಒಂದು ಸ್ವಾಧೀನದಲ್ಲಿರತಕ್ಕ ಮೂರು ಸಾವಿರ ಚೀಲ ಸಿಮೆಂಟ್ ಗಟ್ಟಿಯಾಗಿದೆ ಎನ್ನುವ ಬಗ್ಗೆ ಒಂದು ವರದಿ ಬಂದಿತ್ತು, ಆ ಬಗ್ಗೆ ತನಿಖೆಗೆ ಆಡಿಟ್ ವಿಂಗ್‌ನವರು ಹೋದಾಗ ಅಲ್ಲಿ ಸಿಮೆಂಟ್ ಇಲ್ಲದೇ ಇರುವುದು ಕಂಡುಬಂದಿದೆ. ಈ ಬಗ್ಗೆ ಯಾವುದೇ ವರದಿಯನ್ನು ಇದರಲ್ಲಿ ತಿಳಿಸಿಲ್ಲ. ಆದ್ದರಿಂದ, ಈ ಬಗ್ಗೆ ಮಾನ್ಯ ಮಂತ್ರಿಗಳಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ತಾವು ಹೇಳಿದಂತೆ ಪ್ರಕರಣದ ಬಗ್ಗೆ ಸರ್ಕಾರಕ್ಕೆ ಆಗಲಿ, ಕೆ.ಪಿ.ಸಿ. ಗಾಗಲಿ ಯಾವ ದೂರು ಬಂದಿಲ್ಲ. ಇವೊತ್ತು ತಾವು ಗಮನಕ್ಕೆ ತಂದಿದ್ದೀರಿ, ತಕ್ಷಣ ವಿಚಾರಣೆ ಮಾಡಿಸಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ವಿಚಾರ ಮಾಡುತ್ತೇನೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಅಧ್ಯಕ್ಷರೆ,...

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಾಡಿ ಕುಳಿತುಕೊಳ್ಳಬೇಕು. ಈಗಾಗಲೇ ತಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಅಧ್ಯಕ್ಷರೆ, ಇದು ಒಂದು ವಿಚಾರ ಕೇಳುತ್ತೇನೆ.

ಅಧ್ಯಕ್ಷರು.—ದಯವಾಡಿ ತಾವು ಕುಳಿತುಕೊಳ್ಳಬೇಕು. ಈಗ ತಾವು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಈಗ ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ ಅವರು ತಮ್ಮ ಪ್ರಶ್ನೆಯನ್ನು ಕೇಳಬೇಕು

ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆ ಸ್ಥಾಪಿಸುವುದು

೧೦೮೮. ಶ್ರೀ ಬಸವರಾಜ ಪಾಟೀಲ ಅಟ್ಟೂರ್ (ಬಸವಕಲ್ಯಾಣ).— ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡಲು ಇರುವರೆವಿಗೂ ನಿಧಿ ಹಣ, ಷೇರು ಸಂಗ್ರಹವಾಗಿದೆ, ಅಂಕಿ ಅಂಶಗಳ ವಿವರ ಒದಗಿಸುವುದು,

ಆ) ಸರ್ಕಾರವು ಯಾವ ತಾರೀಖಿನಲ್ಲಿ ಕೇಂದ್ರ ಸರ್ಕಾರಕ್ಕೆ ಈ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಶಿಫಾರಸ್ಸು ಮಾಡಿದೆ,